NOTICE OF QUESTION OF PRIVILEGE BY SRI GANGA BOVI

ಶ್ರೀ ಗಂಗಾಬೋವಿ (ಗೂಳೂರು).—ಸ್ವಾಮಿ, ಹಕ್ಕುಭಾದ್ಯತೆಗೆ ಸಂಬಂಧಪಟ್ಟ ಪ್ರಶ್ನೆಯನ್ನು ತಾರೀಖು 21-5-1968 ರಲ್ಲಿ ನಡೆದ ವಿಚಾರದ ಬಗ್ಗೆ 171 ಮತ್ತು 178ಯ ನಿಬಂಧನೆಗಳ ಪ್ರಕಾರ ನಾನು ಕಳಿಸಿದ್ದೆ. ದಯವಿಟ್ಟು ಅದನ್ನು ತೆಗೆದುಕೊಳ್ಳಬೇಕು.

Mr. SPEAKER.—I know that; it is all right. The member will please resume his seat.

ಶ್ರೀ ಅಜೀಜ್‌ಸೇಠ್ (ನರಸಿಂಹರಾಜ).—ಆ ಸದಸ್ಯರಿಗೆ ಇಂಗ್ಲೀಷ್ ಬರುವುದಿಲ್ಲ, ದಯವಿಟ್ಟು ಅಧ್ಯಕ್ಷರು ಕನ್ನಡದಲ್ಲಿ ಹೇಳಬೇಕು.

ಅಧ್ಯಕ್ಷರು.—ಆ ಮಾನ್ಯ ಸದಸ್ಯರು ನನ್ನ ಛೇಂಬರಿಗೆ ಬಂದಿದ್ದರು, ಅವರು ಕೊಟ್ಟಿರುವ ನೋಟೀಸು ನನ್ನೆದುರಿಗೆ ಬಂದಿಲ್ಲ. ಆದಷ್ಟು ಬೇಗ ಅದನ್ನು ನೋಡುತ್ತೇನೆ. ಅವರ ವಿಚಾರ ನೋಡಿ ಹೇಳುತ್ತೇನೆ. ಇವತ್ತು ಆಗುವುದಿಲ್ಲ. ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಎಚ್. ಬಿ. ಜ್ಯಾಲನಯ್ಯ (ಧಾನನ).—ಹಾನನ ರೈಲುಬೆ ಸ್ಟೇಷನ್ನಿಗೆ ಒಂದು ಸಾವಿರ ಮೂಟೆ ಗೋಧಿಯು ಶೆಟ್ಟಿಹಳ್ಳಿ ಸೋಷಿಯರ್ ವೆಲ್‌ಫೇರ್ ಆಫೀಸರ ಹೆಸರಿಗೆ ಬಂದಿವೆ. ಅದಕ್ಕೆ ದಾತರು ಯಾರೂ ಇಲ್ಲವೆ ಅದು ಕೊಳೆಯುತ್ತಾ ಬಿದ್ದಿದೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ?

Mr. SPEAKER.—I can understand the anxiety of the Hon'ble Member. But, if a point is raised quite in a surprising manner, it becomes difficult. The hon'ble Member can take action under Rule 312, and I shall permit it. Otherwise, it becomes difficult.

STATEMENT OF THE MINISTER FOR LABOUR

ಶ್ರೀ ಕೆ. ಎಚ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಸಭಾಪತಿಗಳೇ, ನಾನು ಅನೇಕ ಸಲ ಪ್ರಶ್ನೆಗಳಿಗೆ ಉತ್ತರ ಕೊಡುವ ವಿಚಾರವಲ್ಲಿ ಪ್ರಸ್ತಾಪವಾಡಿದ್ದೇನೆ. ನಾನು ಈ ಸಭೆಯ ಸದಸ್ಯ ನಾದಮೇಲೆ ಇವತ್ತಿನವರೆಗೆ ಅನೇಕ ಪ್ರಶ್ನೆಗಳನ್ನು ಕಳಿಸಿದ್ದೇನೆ. ಅದಕ್ಕೆ ಸರಕಾರದಿಂದ ಯಾವಾಗಲೂ ಸರಿಯಾದ ಉತ್ತರ ಬಂದಿಲ್ಲ. ತಮಗೆ ವಿಶ್ವಾಸವಾಗಬೇಕು ಯಾವುದಿದೆ, ಸರಕಾರದ ಭ್ರಷ್ಟಾಚಾರವನ್ನು ಬೈಲಿಗೆಳೆಯುವುದು ಯಾವುದಿದೆ ಅಂಥಾದನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡುವ ಪ್ರಯತ್ನ ನಡೆದಿದೆ. 10 ಪ್ರಶ್ನೆಗಳಿಗಿಂತ ಹೆಚ್ಚಾಗಿ ಕೇಳಬಾರದು ಎಂದು ಹೇಳುತ್ತಾರೆ, ಒಂದು ಸೆಷನ್‌ನಲ್ಲಿ 10 ಪ್ರಶ್ನೆ ಕೇಳಲು ಹಕ್ಕಿದೆ. ಸರಕಾರ ಹೇಡಿತನದಿಂದ ಅಥವಾ ಉದ್ದೇಶ ಪೂರ್ವಕವಾಗಿ ಉತ್ತರ ಕೊಡುವುದನ್ನು ಕಡಮೆಮಾಡುತ್ತಿರುವುದರಿಂದ ಸಾರ್ವಜನಿಕ ಹಿತಕ್ಕೆ ಧಕ್ಕೆ ಯಾಗಿದೆ. 40ನೆಯ ರೂಲು ವಿಶದವಾಗಿದೆ. 15 ದಿವಸಗಳಲ್ಲಿ ಉತ್ತರ ಕೊಡಬೇಕು. ಸರ ಕಾರ ಜಾಗ್ರತೆ ಉತ್ತರ ಕೊಡುವುದಕ್ಕಾಗದಿದ್ದರೆ ಅಧ್ಯಕ್ಷರಿಗೆ ತಿಳಿಸಬೇಕು.

ಸರ್ಕಾರದವರು ಒಂದು ವೇಳೆ ಯಾವುದೇ ಕಾರಣಕ್ಕಾಗಿ ಉತ್ತರಗಳನ್ನು ಕಳಿಸುವುದಕ್ಕಾಗುವುದಿಲ್ಲವೆಂದರೆ ತಮಗೆ ಒಪ್ಪುವಂತೆ ನಿವೇದನೆ ಮಾಡಿ ಕಾಲಾವಕಾಶವನ್ನು ಕೇಳಬಹುದು. ಸರ್ಕಾರ ಅಷ್ಟು ಸೂಡ್ಡದಲ್ಲ, ಅಧಿಕ್ಷರೇ ದೊಡ್ಡವರು ಎನ್ನುವ ಅಭಿಪ್ರಾಯವನ್ನು ನಾನು ತಾಳಿದ್ದೇನೆ. ಸರ್ಕಾರವೇ ಆಗಲಿ ಯಾರೇ ಆಗಲಿ ನಿಯಮಗಳನ್ನು ಮೀರಿ ಹೋಗುವುದಕ್ಕೆ ಸಾಧ್ಯವಿಲ್ಲ. ಈ ಸರ ಕಾರ ನಿಯಮಗಳನ್ನು ಮೀರಿಕೋಗಲಿಕ್ಕೆ ಹತ್ತಿದೆ. ಶ್ರೀವರ್ಧನ್ ಕೆ. ಪುಟ್ಟಸ್ವಾಮಿಯವರು ಪಾರ್ಲಮೆಂಟರಿ ಮಂತ್ರಿಗಳಾಗಿ ಬಂದ ಮೇಲೆ ವಿನಾಯಿತಿ ಸುಧಾರಣೆಯಾಗಿದೆ ಎಂದು ಇದ್ದೆವು. ಪ್ರಶ್ನೆಗಳಿಗೆ ಉತ್ತರಗಳನ್ನು ಯಾವಾದರೂ ಅಧಿಕಾರಿಗಳು ಮುಚ್ಚಿಟ್ಟಿದ್ದಾರೆಯೇ ಎನ್ನುವುದು ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ರಚನಾತ್ಮಕವಾದ ಸಲಹೆಗಳು ವಿರೋಧ ಪಕ್ಷದ ಕಡೆಂದ ಬಂದರೆ ತೀವ್ರ ಗಮನವನ್ನು ಅದಕ್ಕೆ ಕೊಡುತ್ತೇವೆ ಎಂದು. ಪ್ರಶ್ನೆಗಳಿಗೆ ಉತ್ತರ ಕೊಡದೆ ಮುಚ್ಚಿಟ್ಟ ಮಂತ್ರಿಗಳನ್ನು ಕಿತ್ತೊಗೆಯುವಿಕ್ಕೆ ಅವರು ಪ್ರಯತ್ನ ಮಾಡತ್ತಾರೆಯೇ? ಇದೆಲ್ಲದರ ಬಗ್ಗೆ ಮಾನ್ಯ ಅಧ್ಯಕ್ಷರು ನನ್ನೆ ಕೊಟ್ಟಂಥ ಆಶ್ವಾಸನೆಯನ್ನು ನಡೆಸಿಕೊಡಬೇಕು ಎಂದು ನಿವೇದನೆ ಮಾಡುತ್ತೇನೆ.